# ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22-05-2015ರ ನಡವಳಿಗಳು

## ವಿಷಯದ ಸಂಖ್ಯೆ : 64 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶುಶ್ರೂಷಕಿಯವರ ವೇತನ ಶ್ರೇಣಿಯನ್ನು ರೂ.4150-7800 ಗಳಿಂದ 4575-8400ಗೆ ಪರಿಷ್ಕರಿಸುವ ಬಗ್ಗೆ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 43 ಎಂಎನ್‌ಯು 1999, ದಿನಾಂಕ:10-12-2002 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ, ಭಾರತ ಜನಸಂಖ್ಯಾ ಯೋಜನೆ-8 ರಡಿ ಕಾರ್ಯನಿರ್ವಹಿಸುತ್ತಿದ್ದ ಈ ಕೆಳಕಂಡ ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಸಂಖ್ಯೆ | ವೇತನ ಶ್ರೇಣಿ |
|---|---|---|---|
| 1 | ವೈದ್ಯರುಗಳು | 53 | 7400-13120 |
| 2 | ಸ್ಟಾಫ್‌ನರ್ಸ್ | 42 | 4150-7800 |
| 3 | ಲ್ಯಾಬ್ ಟೆಕ್ನಿಷಿಯನ್ | 21 | 3850-7050 |
| 4 | ಎ.ಎನ್.ಎಂ. | 04 | 3300-6300 |
| 5 | ಗುಮಾಸ್ತರು | 20 | 3000-5450 |
| 6 | ಚಾಲಕರು | 06 | 3000-5450 |
| 7 | ದಲಾಯತ್ | 16 | 2500-3850 |

2. ಮಹಾನಗರ ಪಾಲಿಕೆಯಲ್ಲಿ ವಿಲೀನಗೊಂಡ 40 ಮಂದಿ ಶುಶ್ರೂಷಕಿಯರುಗಳು, ದಿನಾಂಕ: 20-10-2005 ರಂದು ಸಲ್ಲಿಸಿರುವ ಮನವಿಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದಲ್ಲಿ ಶುಶ್ರೂಷಕಿಯರ ವೇತನ ಶ್ರೇಣಿ ರೂ.4575-8400 ರಷ್ಟಿದ್ದು, ಅದೇ ವೇತನ ಶ್ರೇಣಿಯನ್ನು ನೀಡುವಂತೆ ಕೋರಿರುತ್ತಾರೆ.

3. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಪತ್ರ ಸಂಖ್ಯೆ:ಬಿ12(4)/ಪಿಆರ್/576/ 2006-07, ದಿನಾಂಕ:20-07-2006 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯು ದಿನಾಂಕ: 15-06-2006 ರಂದು ವಿಷಯ ಸಂಖ್ಯೆ:7(93) ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಭಾರತ ಜನಸಂಖ್ಯೆ ಯೋಜನೆ-8ರ ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು, ನಂತರದಲ್ಲಿ ಸರ್ಕಾರಿ ಆದೇಶದಂತೆ, ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಲ್ಲಿ ದಿನಾಂಕ:13-12-2002 ರಿಂದ ಜಾರಿಗೆ ಬರುವಂತೆ ವಿಲೀನಗೊಂಡಿರುವ 40 ಮಂದಿ ಶುಶ್ರೂಷಕಿಯವರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಶುಶ್ರೂಷಕಿಯವರಿಗೆ ನೀಡುತ್ತಿರುವ ವೇತನ ಶ್ರೇಣಿ ರೂ.4575-8400 ಗಳನ್ನು ನೀಡಲು ನಿರ್ಣಯವನ್ನು ಕೈಗೊಂಡಿದ್ದು, ಸದರಿ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಪತ್ರ ಸಂಖ್ಯೆ:ಬಿ12(4)/ಪಿಆರ್/576/ 2005-06, ದಿನಾಂಕ:10-05-2011 ರಲ್ಲಿ ಪಾಲಿಕೆಯ ಶುಶ್ರೂಷಕಿಯರು ಹೊಂದಿರುವ ವಿದ್ಯಾರ್ಹತೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶುಶ್ರೂಷಕಿಯರ

..........................2

ನೇರನೇಮಕಾತಿ ಹುದ್ದೆಗೆ ನಿಗಧಿಪಡಿಸಲಾಗಿರುವ ವಿದ್ಯಾರ್ಹತೆಗೆ ಸಮನಾಗಿದೆಯೆಂದು ಮತ್ತು ಪಾಲಿಕೆಯ ಆಸ್ಪತ್ರೆಗಳಲ್ಲಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕಿಯರ ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಪತ್ರ ಸಂಖ್ಯೆ:ಬಿ12(4)/ಪಿಆರ್/576/ 2013–14, ದಿನಾಂಕ:22–10–2013 ರಲ್ಲಿ 40 ಮಂದಿ ಶುಶ್ರೂಷಕಿಯವರಿಗೆ ವೇತನ ಶ್ರೇಣಿ ರೂ.4575–8400/– ಗಳಿಗೆ ದಿನಾಂಕ:13–12–2002 ರಿಂದ ಅನ್ವಯವಾಗುವಂತೆ ನಿಗಧಿಪಡಿಸಿದಲ್ಲಿ, ಇದಕ್ಕೆ ಒಟ್ಟು ರೂ.73,83,400/– ಗಳು ವೆಚ್ಚವಾಗಲಿದ್ದು, ಸದರಿ ಮೊತ್ತವನ್ನು ಪಾಲಿಕೆಯ ವತಿಯಿಂದ ಭರಿಸುವುದಾಗಿ ತಿಳಿಸಿರುತ್ತಾರೆ.

6. ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 511 ಎಂಎನ್‌ವೈ 2009**
**ಬೆಂಗಳೂರು, ದಿನಾಂಕ:25–11–2014**

7. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ, ಐ.ಪಿ.ಪಿ. ಯೋಜನೆ–8 ರಡಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದು, ದಿನಾಂಕ: 10–12–2002 ರಂದು ಖಾಯಂ ಆಗಿ ವಿಲೀನಗೊಂಡಿರುವ 40 ಮಂದಿ ಶುಶ್ರೂಷಕಿಯರಿಗೆ, 1994ರ ಪರಿಷ್ಕೃತ ವೇತನ ಶ್ರೇಣಿಯಂತೆ ರೂ.4150–7800 ಗಳನ್ನು ನಿಗಧಿಪಡಿಸಿರುವುದನ್ನು ಮಾರ್ಪಡಿಸಿ, 1998ರ ಪರಿಷ್ಕೃತ ಶ್ರೇಣಿಯಂತೆ ರೂ.4575–8400 ಗಳ ವೇತನ ಶ್ರೇಣಿಯನ್ನು ದಿನಾಂಕ:13–12–2002 ರಿಂದ ಭವಿಷ್ಯವರ್ತಿಯಾಗಿ (Prospective) ಜಾರಿಗೆ ಬರುವಂತೆ ನಿಗಧಿಪಡಿಸಲು ಸರ್ಕಾರವು ಅನುಮೋದನೆ ನೀಡಿದೆ.

8. ಈ ಆದೇಶವನ್ನು ಆರ್ಥಿಕ ಇಲಾಖೆಯ (ದಿನಾಂಕ:29–06–2010, 05–01–2011, 11–11–2011, 16–07–2012) ರಂದು ನೀಡಿರುವ ಅಭಿಪ್ರಾಯ ಮತ್ತು ಸಚಿವ ಸಂಪುಟವು ಪ್ರಕರಣ ಸಂಖ್ಯೆ:ಸಿ:552/2014, ದಿನಾಂಕ:07–11–2014 ರಲ್ಲಿ ತೆಗೆದುಕೊಂಡಿರುವ ನಿರ್ಣಯದಂತೆ ಹೊರಡಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಮೇಲ್ಕಂಡಂತೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಡವಳಿಗಳ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13–03–2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು